# ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:27-01-2021.
2) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:04.03.2021.
3) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:08.03.2021

* * * * *

**ಪ್ರಸ್ತಾವನೆ:-**

2020-21ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿ:31-03-2021 ರಂದೇ 2020-21ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

ವೇತನ / ವೇತನ ಬಾಕಿ ಬಿಲ್ಲುಗಳು / ಹಬ್ಬದ ಮುಂಗಡ ಬಿಲ್ಲು / ಅನುದಾನಿತ ವೇತನ ಬಿಲ್ಲುಗಳು/ ಇತರೆ ಅನುದಾನಿತ ಬಿಲ್ಲುಗಳು. ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು / ಪ್ರಯಾಣ ಭತ್ಯೆ ಮತ್ತು ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳನ್ನು ಸಲ್ಲಿಸುವ ದಿನಾಂಕವನ್ನು ಉಲ್ಲೇಖಿತ (2) ರ ಆದೇಶದಲ್ಲಿ ದಿನಾಂಕ:05.03.2021 ರಿಂದ ದಿನಾಂಕ:08.03.2021 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಹಾಗೆಯೇ ಉಲ್ಲೇಖಿತ (2) ರ ಆದೇಶದಲ್ಲಿ ದಿನಾಂಕ:08.03.2021 ರವರೆಗೆ ವಿಸ್ತರಿಸಿ ಆದೇಶಿಸಲಾಗಿದ್ದನ್ನು ಉಲ್ಲೇಖ (3) ರ ಆದೇಶದಲ್ಲಿ ಪುನಃ ದಿನಾಂಕ: 12.03.2021 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಅದರೆ, ಹಲವಾರು ಇಲಾಖೆಗಳಿಂದ ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸುವ ದಿನಾಂಕವನ್ನು ಇನ್ನೂ ವಿಸ್ತರಿಸುವಂತೆ ಕೋರಿಕೆ ಬಂದಿರುತ್ತದೆ. ಆದುದರಿಂದ ಈ ಅದೇಶ.

## ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ಬೆಂಗಳೂರು, ದಿನಾಂಕ: 12-03-2021

ಈ ಕೆಳಕಂಡ ವೆಚ್ಚಗಳಿಗೆ ಸಂಬಂಧಿಸಿದಂತೆ ಈಗಾಗಲೇ ನಿಗಧಿಪಡಿಸಿರುವ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಬಿಲ್ಲುಗಳ ಸ್ವರೂಪ/ವಿವರಗಳು | ಮಾನ್ಯ ಮುಖ್ಯಮಂತ್ರಿಯವರಿಂದ ಅನುಮೋದಿತ ಕಡೆಯ ದಿನಾಂಕ | ವಿಸ್ತರಿಸಲಾಗಿರುವ ಕಡೆಯ ದಿನಾಂಕ | ವಿಸ್ತರಣೆಗೆ ಪ್ರಸ್ತಾಪಿಸಿರುವ ಕಡೆಯ ದಿನಾಂಕ |
|---|---|---|---|---|
| 1 | 2 | 3 | 4 | 5 |
| 1 | ವೇತನ / ವೇತನ ಬಾಕಿ ಬಿಲ್ಲುಗಳು/ ಹಬ್ಬದ ಮುಂಗಡ ಬಿಲ್ಲು/ಅನುದಾನಿತ ವೇತನ ಬಿಲ್ಲುಗಳು/ ಇತರೆ ಅನುದಾನಿತ ಬಿಲ್ಲುಗಳು: | 05-03-2021 | 12-03.2021 | 15-03-2021 |

| | | | | |
|---|---|---|---|---|
| 2 | ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು: **31.01.2021 ರೊಳಗೆ ಬಿಡುಗಡೆಗಳು** | 05-03-2021 | 12-03-2021 | 15-03-2021 |
| | **31.01.2021 ನಂತರದ ಬಿಡುಗಡೆಗಳು** | 12-03-2021 | - | 19-03-2021 |
| 3 | ವಿದ್ಯುಚ್ಛಕ್ತಿ, ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು: **31.01.2021 ರೊಳಗೆ ಬಿಡುಗಡೆಗಳು** | 05-03-2021 | 12-03-2021 | ಬದಲಾವಣೆ ಇರುವುದಿಲ್ಲ. |
| | **31.01.2021 ನಂತರದ ಬಿಡುಗಡೆಗಳು** | 12-03-2021 | - | 20-03-2021 |
| 4 | ZP / TP ಗೆ ಸಂಬಂಧಿಸಿದ ಎಲ್ಲಾ upload ಗಳು | 15-03-2021 | - | 20-03-2021 |

ಮೇಲ್ಕಂಡ ಬಿಲ್ಲುಗಳನ್ನು ಹೊರತುಪಡಿಸಿ ಉಳಿದ ಬಿಲ್ಲುಗಳನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ 01 ಬಿಪಿಇ 2021 ಬೆಂಗಳೂರು, ದಿನಾಂಕ:27.01.2021 ರಲ್ಲಿ ನಿಗಧಿಗೊಳಿಸಲಾಗಿದ್ದ ಕಾಲಮಿತಿಯು ಮುಂದುವರೆಯುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.karnataka.gov.in ನಿಂದ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/3/2021

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಎಫ್.ಆರ್ ಮತ್ತು ಬಿಸಿಸಿ).

12/3

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು (A&E) / (G&SSA) / (E&RSA), ಕರ್ನಾಟಕ, ಬೆಂಗಳೂರು.
2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

5) ಸರ್ಕಾರದ ಎಲ್ಲಾ ಅಪರ / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

13) ಎಲ್ಲಾ ಇಲಾಖಾ ಮುಖ್ಯಸ್ಥರು.

14) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.